ರೋಗಗ್ರಸ್ಥ ಸಣ್ಣ ಪ್ರಮಾಣದ ಕೈಗಾರಿಕೆಗಳ ಕುರಿತು

1079 (1288) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರೋಗಗ್ರಸ್ಥ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಪುನಃಶ್ಚೇತನಕ್ಕಾಗಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಿಂದ ಕೈಗೊಂಡಿರುವ ಯೋಜನೆಗಳೇನು?

ಆ) ಸಣ್ಣ ಪ್ರಮಾಣದ ಕೈಗಾರಿಕೆಗಳ ಆಧುನೀಕರಣ ಮತ್ತು ತಂತ್ರಜ್ಞಾನದ ಬೆಳವಣಿಗೆ ಇಲಾಖೆಯಿಂದ ಜಾರಿಗೊಳಿಸಿರುವ ಯೋಜನೆ ಮತ್ತು ನಿಧಿಯ ವಿವರ ನೀಡಿ ;

ಇ) ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಗೆ ಇಲಾಖೆಯಿಂದ ನೀಡಿರುವ ಅನುದಾನ ವಿವರಗಳನ್ನು ನೀಡುವುದು?

ಶ್ರೀ ಎಸ್. ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು)

ಅ) ರಾಜ್ಯದಲ್ಲಿರುವ ರೋಗಗ್ರಸ್ಥ ಕೈಗಾರಿಕೆಗಳನ್ನು ಪುನಶ್ಚೇತನಗೊಳಿಸಲು 1986ರಿಂದಲೂ ಪ್ರತ್ಯೇಕ ನೀತಿಗಳನ್ನು ಅಗಿಂದಾಗ್ಗೆ ರೂಪಿಸಿರುತ್ತಾ ಬಂದಿದೆ . ರಾಜ್ಯದಲಿಂಡಿರುವ ರೋಗಗ್ರಸ್ಥ ಕೈಗಾರಿಕೆಗಳ ಪುನಃಶ್ಚೇತನಕ್ಕಾಗಿ 1996ರಲ್ಲಿ ಘೋಷಿಸಿರುವ ನೀತಿಯ ಪ್ರಕಾರ ರೋಗ ಗ್ರಸ್ಥ ಕೈಗಾರಿಕೆಗಳಿಗೆ ಕೆಳಕಂಡ ರಿಯಾಯಿತಿ ಮತ್ತು ಸೌಲಭ್ಯಗಳನ್ನು ನೀಡಲಾಗುತ್ತಿದೆ ;

1) ಭಾರತೀಯ ರಿಸ್ರ್ವ್ ಬ್ಯಾಂಕ್ ಪರಿಭಾಷೆಯಲ್ಲಿ ಬರುವ ಕೈಗಾರಿಕೆಗಳಿಗೆ ರೂ . 2. 50 ಲಕ್ಷಗಳಿಗೆ ಮಿತಿಗೊಳಪಟ್ಟ ಬೀಜಧನ ಸಾಲ ಸಹಾಯ

2) ಮಾರಾಟ ತೆರಿಗೆ ಬಾಕಿ ಪಾವತಿಯ ಕಂತುಗಳನ್ನು ಮುಂದೂಡುವುದು.

3) ಕೆ. ಪಿ. ಟಿ. ಸಿ. ಎಲ್ ಯಿಂದ ವಿದ್ಯುತ್ ದರ ಮತ್ತು 3 ಎಂ. ಎಂ. ಡಿ ಇವುಗಳ ಬಾಕಿಯನ್ನು ಬಡ್ಡಿಯಿಲ್ಲದೆ ಮುಂದೂಡುವುದು ಹಾಗೂ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುವುದು.

4) ಕೆ. ಐ. ಎ. ಡಿ. ಬಿ: ಕೆ. ಎಸ್. ಎಸ್. ಐ. ಡಿ. ಸಿ: ಕಿಯೋನಿಕ್ಸ್ ಸಂಸ್ಥೆಗಳ ಸಾಲದ ಬಾಕಿ ಕಂತುಗಳ ಮುಂದೂಡಿಕೆ

5) ಅಭಿವೃದ್ಧಿ ಸಾಲದ ಕಂತುಗಳ ಮುಂದೂಡಿಕೆ

6) ಕಾರ್ಮಿಕ ಇಲಾಖೆಯ ಮುಖಾಂತರ ರೋಗಗ್ರಸ್ಥ ಸಣ್ಣ ಕೈಗಾರಿಕೆಗಳಿಗೆ ಸಹಾಯ ನೀಡುವುದು.

ಆ) 1996- 2001ರ ಕೈಗಾರಿಕಾ ನೀತಿಯಲ್ಲಿ , ಆಧುನೀಕರಣ, ತಾಂತ್ರಿಕ ಉನ್ನತೀಕರಣ ಮತ್ತು ಗುಣಮಟ್ಟ ವ್ಯವಸ್ಥೆಯಬಗ್ಗೆ ಇಲಾಖೆಯು ಹೆಚ್ಚಿನ ಒತ್ತು ನೀಡಲಾಗಿದೆ . ಪ್ರಸ್ತುತ ಕಾರ್ಯದಲ್ಲಿ ತೊಡಗಿರುವ ಕೈಗಾರಿಕೆಗಳು, ಆಧುನೀಕರಣ, ಸಂಶೋಧನೆ ಮತ್ತು ಅಭಿವೃದ್ಧಿ, ಐ. ಎಸ್. ಓ. ಐ. ಎಸ್. ಐ, ಪೇಟೆಂಟ್ ಅಳವಡಿಸಿಕೊಂಡಲ್ಲಿ ಘಟಕದ ಸ್ಥಿರಾಸ್ತಿ ಮೇಲೆ (ಗರಿಷ್ಠ ರೂ . 10.00 ಲಕ್ಷ) ಶೇ. 10 ರಷ್ಟು ಸಹಾಯ ಧನ ನೀಡಲಾಗುವುದು. 1996- 2000 ಕೈಗಾರಿಕಾ ನೀತಿಯಂತೆ, ಸಣ್ಣ ಪ್ರಮಾಣದ ಕೈಗಾರಿಕೆಗಳು

ತಾಂತ್ರಿಕ ಉನ್ನತೀಕರಣ ಮತ್ತು ಗುಣಮಟ್ಟ ಸುಧಾರಣೆ ಇವುಗಳ ಬಗ್ಗೆ ಹೆಚ್ಚು ಒತ್ತು ನೀಡುವ ಬಗ್ಗೆ ಕರ್ನಾಟಕವು ಇಡೀ ದೇಶದಲ್ಲೇ ಪ್ರಥಮವಾಗಿ ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್ತು ಎಂಬ ಪ್ರತ್ಯೇಕ ಸಂಸ್ಥೆಯನ್ನು ಪ್ರಾರಂಭಿಸಿದೆ. ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್ತು ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುತ್ತಿದೆ:

1) ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಐ. ಎಸ್. ಓ-9000 ಮತ್ತು ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ (ಬಿ. ಐ.ಎನ್) ಮೂಲಕ ಗುಣಮಟ್ಟ ನಿರ್ವಹಣೆ

2) ಸಣ್ಣ ಪ್ರಮಾಣದ ಕೈಗಾರಿಕೆಗಳಲ್ಲಿ ವ್ಯಾಪಾರ, ಅಭಿವೃದ್ಧಿ ಕಾರ್ಯಕ್ರಮಗಳು ರಫ್ತು ಸೇವೆಗಳು,

3) ಪೇಟೆಂಟ್ ಪ್ರಮಾಣ ಪತ್ರ ಪಡೆಯುವ ಕೈಗಾರಿಕೆಗಳಿಗೆ ಸಹಾಯ ನೀಡುವುದು,

4) ಸಣ್ಣ ಪ್ರಮಾಣದ ಕೈಗಾರಿಕಾ ವಲಯದಲ್ಲಿ ವಿಶ್ವ ವ್ಯಾಪಾರ ಸಂಸ್ಥೆಯ ಪ್ರಭಾವ (ಡಬ್ಲು. ಟಿ. ಓ) ಆಂದೋಳನಾ ಕಾರ್ಯಕ್ರಮಗಳು

5) ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಐ.ಎಸ್. ಓ-9000 ಜಾಗೃತಿಕ ಕಾರ್ಯಕ್ರಮಗಳು,

6) ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ತಾಂತ್ರಿಕ ನಿರ್ವಹಣೆ ಕಾರ್ಯಕ್ರಮಗಳು, ಮತ್ತು

7) ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ತಾಂತ್ರಿಕ ವರ್ಗಾವಣೆ ಬಗ್ಗೆ ಸಲಹೆಗಳು.

ಹಣಕಾಸಿನ ಪ್ರೋತ್ಸಾಹ :

1) ಐ.ಎಸ್. ಓ-2000 ಪಡೆಯುವ ಕೈಗಾರಿಕೆಗಳಿಗೆ ರೂ. 75,000-00 ಪ್ರೋತ್ಸಾಹಧನ ನೀಡುವುದು,

2) ಐ.ಎಸ್. ಐ ಮುದ್ರೆ ಪಡೆಯುವ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ, ಗುರುತು ಶುಲ್ಕ ವೆಂದು ರೂ. 5,000 ಹಾಗೂ ಯಂತ್ರೋಪಕರಣಗಳಿಗಾಗಿ ರೂ. 25,000-00 ಸಹಾಯಧನ,

3) ಆಗ್‌ಮಾರ್ಕ್ ಪಡೆಯುವ ಕೈಗಾರಿಕೆಗಳಿಗೆ ಯೋಜನಾ ವೆಚ್ಚದ ಮೇಲೆ ಶೇ.25ರಷ್ಟು ಸಹಾಯಧನ- ಗರಿಷ್ಠ ರೂ. 10,000-00

4) ರಾಷ್ಟ್ರೀಯ ಪ್ರಯೋಗಾಲಯಗಳಿಂದ ತಾಂತ್ರಿಕ ಉನ್ನತೀಕರಣ ವರ್ಗಾವಣೆಗೆ ಯೋಜನಾವೆಚ್ಚ (ಗರಿಷ್ಠ ರೂ. 50,000) ಮೇಲೆ ಶೇ. 75ರಷ್ಟು ಸಹಾಯಧನ.

5) ಸಣ್ಣ ಪ್ರಮಾಣದ ಕೈಗಾರಿಕೆಗಳು, ತಾಂತ್ರಿಕ ಉನ್ನತೀಕರಣಗಳನ್ನು ಅಳವಡಿಸಿಕೊಂಡಲ್ಲಿ, ಅಂತಹ ಘಟಕಗಳಿಗೆ ಪ್ರಶಸ್ತಿಗಳನ್ನು ನಗದು ರೂಪದಲ್ಲಿ ನೀಡಲಾಗುವುದು,

6) ಸಣ್ಣ ಪ್ರಮಾಣದ ಕೈಗಾರಿಕೆಗಳು ಪಡೆಯುವ ಪೇಟೆಂಟ್‌ಗಳಿಗೆ ಪ್ರೋತ್ಸಾಹಧನ

ಇ)

ಯೋಜನೆ	ಬಿಡುಗಡೆ (ರೂ. ಲಕ್ಷಗಳಲ್ಲಿ)
1) ಕೆ. ಐ. ಬಿ. ಗೆ ಅನುದಾ	30.00
2) ಖಾದಿ ಮಾರಾಟದ ಮೇಲೆ ರಿಯಾಯಿತಿ	200.00
3) ಯೋಜನೇತರ	486.00

ಬೈಲಹೊಂಗಲ ನಗರದಲ್ಲಿ ಒಳಚರಂಡಿ ಕಾಮಗಾರಿ

1082 (1254) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾಂ ಜಿಲ್ಲಾ ಬೈಲಹೊಂಗಲ ನಗರದಲ್ಲಿ ಹುಡ್ಕೋ ನೆರವಿನಿಂದ ಅಥವಾ ಬೇರೆ ಯಾವುದೇ ನೆರವಿನಿಂದ 2ನೇ ಹಂತದ ಡ್ರೈನೇಜ್ ಸ್ಕೀಮನ್ನು ತೆಗೆದುಕೊಳ್ಳಬೇಕೆಂಬ ಮನವಿಗಳು ಸರ್ಕಾರಕ್ಕೆ ಬಂದಿವೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಅಂದಾಜು ವೆಚ್ಚ ತಯಾರಿಸಲಾಗಿದೆಯೇ? ಹಾಗೂ ಈ ಕೆಲಸಕ್ಕೆ ಎಷ್ಟು ಮೊತ್ತ ನಿಗಧಿಪಡಿಸಲಾಗಿದೆ ?

ಇ) ಈ ಕೆಲಸಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆಯೇ?

ಈ) ಹಾಗಿದ್ದಲ್ಲಿ ಈ ಕೆಲಸಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಿ ಕೆಲಸ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಉ) ವಿಸ್ತರಣಾ ಪ್ರದೇಶಗಳಲ್ಲಿ ಹಾಗೂ ಬೈಲಹೊಂಗಲ ನಗರದ ಓಣಿಗಳಲ್ಲಿ ಒಳಚರಂಡಿ ಡ್ರೈನೇಜ್ ಇಲ್ಲದೆ ಇರುವ ಸಂಗತಿ ನಿಜವೇ? ಹಾಗೂ 1ನೇ ಹಂತದ ಡ್ರೈನೇಜ್ ಕೆಲಸವನ್ನು ಎಂದು ಮಾಡಲಾಯಿತು?

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು)

ಅ) ಬಂದಿದೆ.

ಆ) ಅಂದಾಜನ್ನು ತಯಾರಿಸಲಾಗಿದೆ. ಯೋಜನೆಗೆ ಮಂಜೂರಾತಿ ನಂತರ ಹಣವನ್ನು ಗೊತ್ತುಪಡಿಸಲಾಗುವುದು.

ಇ) ಇಲ್ಲ.

ಈ) ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ನಿಜ. 1ನೇ ಹಂತದ ಯೋಜನೆಯನ್ನು 1988-89ನೇ ಇಸವಿಯಲ್ಲಿ ಕೈಗೊಳ್ಳಲಾಗಿದೆ.